ಯಾರು ಬೇಕು? ಜೀವನವನ್ನು ಸಂಭ್ರಮಿಸುವ ಇವಳೋ? ವಿಮುಕ್ತಸ್ಥಿತಿಯಲ್ಲಿದ್ದ ಅವಳೋ?

ಮಾ ನಮ್ಮನ್ನು ಸೇರಿದ್ದೇ, ಮೊದಲು ತನ್ವಿಯನ್ನು ಅಪ್ಪಿಕೊಂಡು ಗಲ್ಲ ತಡವಿದಳು. 'ಐ ವೆಲ್ಕಮ್ ಯು ಇನ್ಟು ಮೈ ಸನ್ಸ್ ಲೈಫ್, ಕಿಡೋ... ನೀನು ನನಗೆ ತುಂಬಾ ಹಿಡಿಸಿದೀ...' ಅಂದಳು. ತನ್ವಿಯ ಖುಷಿಗೆ ಎಣೆಯಿಕ್ಕುವುದು ಕಷ್ಟವೇ ಆಯಿತು.

ಊಟವಾದ ಮೇಲೂ, ನಾಲ್ವರೂ ಸುಮಾರು ಹೊತ್ತು ಮೇಜಿನಲ್ಲುಳಿದೆವು. ಖುಷಿಯಲ್ಲದೆ ಬೇರೇನಿದ್ದಿರದ ಅತ್ಯುಚ್ಚ ಅತ್ಯುತ್ಕಟ ಪರಿಸ್ಥಿತಿ ಅದು. ಅನುಭವಿಸಿದ್ದು ಬಲು ಹೊತ್ತಿರಲಂತ ದೇವರಲ್ಲಿ ಮೊರೆಯಿಟ್ಟೆ. ಈ ಬೆಳಿಗ್ಗೆ ಕಣ್ಣಾರೆ ಕಂಡಿದ್ದು, ಪಾ—ನಿಂದ ಕೇಳಪಟ್ಟಿದ್ದು... ಇವೆಲ್ಲ ಕೆಟ್ಟ ಕನಸೇ ಅಂತ ನನ್ನನಗೇ ಶಂಕೆಯಾಯಿತು.

ಹತ್ತೂವರೆಯ ಸುಮಾರಿಗೆ ರೆಸ್ತುರಾದಿಂದ ಕದಲಿ, ಕಾರಿರುವಲ್ಲಿಗೆ ಬರುವಾಗ ಮಾ ನನ್ನ ಹಿಂದೆಯೇ ನಡೆದುಬಂದು, 'ಸಿದ್ಧ್... ಒಂದು ವಿಷಯ...' ಅಂತಂದು ತಡೆತಡೆದು ನಡೆದಳು. ನಡೆನಡೆದು ತಡೆದಳು. 'ಪಾ ನಿನಗೆ ಎಲ್ಲವನ್ನೂ ಹೇಳಿದ್ದಾನಲ್ಲವಾ? ಐ ಹ್ಯಾವ್ ಬೀನ್ ಕಾಲ್ಡ್ ಬೈ ದಿ ಡಿವೈನ್... ನಾನು ನಿನ್ನ ತಂದೆಯೊಡನೆ ಇರುತೀನಿ ಅಂದರೂ ಅವನಿಗೆ ನನ್ನನ್ನು ತಗೊಳ್ಳಲಿಕ್ಕಾಗೋದಿಲ್ಲ... ಅವನಿಗೆ ನಾನು ಅರ್ಥ ಆಗೋದಿಲ್ಲ. ಅಲ್ಲದೆ ಸಾಮಾನ್ಯರಿಗೆ ಅರ್ಥ ಆಗೋ ಹಾಗೆ ಕೂಡ ನಾನಿಲ್ಲ. ನನಗೆ ಈಗೀಗ ಅನಿಸುತ್ತೆ, ಹುಟ್ಟುವಾಗ ನಾನು ಹೇಗಿದ್ದೆನೋ ಈಗಲೂ ಹಾಗೇ ಇದ್ದೀನಿ. ಭಾವನೆಗಳಿಲ್ಲದ ಅಥವಾ ಭಾವನೆಗಳೆಂದರೇನೆಂದು ಅರ್ಥವಾಗದ ಮಗುವಿನ ಹಾಗೆ. ಅಂಡ್ ದಟ್ಸ್ ಡಿವೈನ್!' ಹೀಗೆ ಹೇಳುತ್ತಿರುವ ಅವಳ ಕಂಗಳಲ್ಲಿ ಕೋಟ್ಯಂತರ ತಾರೆಗಳು ಮಿಣಕಿ ಕಂಡವು. ಮಾತು ಭಾವನೆಗಳ ವಜನಿಲ್ಲದೆಯೇ ಇತ್ತು. 'ಅವನೇ ಡಿವೋರ್ಸ್ ಮಾಡೋಣ ಅಂತಂದ... ಕೂಡಲೇ ಒಪ್ಪಿಬಿಟ್ಟೆ. ನನ್ನದೇ ಸ್ವಾರ್ಥಕ್ಕೆ... ಸಾಧನೆಯ ಹಾದಿಯಲ್ಲಿರುವ ಅಡಚಣೆಯೊಂದು ತಂತಾನೇ ತಪ್ಪುತ್ತಾದರೆ ಆ ಜಗನ್ನಿಯಾಮಕವು ಇನ್ನೂ ಹತ್ತಿರವಾಗುತ್ತಲ್ಲವಾ?' ಎಂದು ಹೇಳುವಾಗ ಅವಳ ಮೋರೆಯಲ್ಲಿನ ಕಾಂತಿ ಹೆಚ್ಚಿತ್ತು. 'ನಿನಗೆ ಈ ಮುಂದೆ ತನ್ವಿಯ ಜೊತೆ ಇನ್ನೂ ಒಂದು ಜವಾಬ್ದಾರಿಯಿದೆ... ಹೌದು... ನಿನ್ನ ಪಾ.... ಅವನ ಜವಾಬ್ದಾರಿಯೂ ಈ ಮುಂದೆ ನಿನ್ನ ಮೇಲೆಯೆ. ನಾನು ಈ ದಿವಸಕ್ಕಾಗಿಯೇ ಈವರೆಗೆ ಈ ಸಂಸಾರದಲ್ಲಿ ಮಿಕ್ಕಿದ್ದು...' ಅನ್ನುತ್ತ, ನನ್ನನ್ನಪ್ಪಿಕೊಂಡು ತಲೆದಡವಿ ಮುದ್ದಿಸಿದಳು. ಲೋಕಾತೀತವೆನ್ನಿಸುವ ಅನುಭವವೊಂದು ಮೈಯಲ್ಲಿ ಮಿಂಚಾಗಿ ಸಂಚರಿಸಿತ್ತು. ನಾನು ಕೆಲಕಾಲ ಅಮ್ಮನ ಹೆಗಲಿನಲ್ಲುಳಿದೇ ತನ್ವಿಯತ್ತ ನೋಡಿದೆ. ಅಖಂಡ ಖುಷಿಯಲ್ಲಿದ್ದಳು. ಪಾ—ನೊಡನೇನೋ ಹಂಚಿಕೊಂಡು ನಲಿಯುತ್ತಿದ್ದಳು. ಇಂಥದೊಂದು ಮೊಮೆಂಟು ಕರಗದುಳಿದು, ಫೋಟೊಸ್ಟಿಲ್ಲಿನಂತೆ ಹೆಪ್ಪಿಬಿಡಲೆಂದು ಆಕಾಶದಲ್ಲಿ ಮೊರೆಯಿಟ್ಟೆ.

---


## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಅವರ ಕವಿತೆಗಳ ಸಂಗ್ರಹಗಳಾಗಿವೆ. ಬೆಂಗಳೂರಿನಲ್ಲಿ ನೆಲೆಸಿರುವ ವಸ್ತಾರೆ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಯೋಗ ನಿರತರು.